ಎನ್ನುವ ಮಾತು ಹೇಳಿದ್ದೀರಿ ಇದನ್ನು ಸ್ಪಷ್ಟಪಡಿಸಬೇಕೆನ್ನುವ ಮಾತನ್ನು ಕೇಳಿದರು. ಮಾನ್ಯ ಅಧ್ಯಕ್ಷರೇ ಈ ಪ್ರಶ್ನೆಯಲ್ಲಿರತಕ್ಕಂಥಾದ್ದು ಸಂಪೂರ್ಣ ಕಲಬೆರಕೆಯಾಗಿರುವ ಕಂಪನಿಗಳ ಮೇಲೆ ಕ್ರಮ ತೆಗೆದುಕೊಂಡಿರತಕ್ಕಂಥಾದ್ದು, ಅದರಲ್ಲಿ ಸಬ್‌ಸ್ಟ್ಯಾಂಡರ್ಡ್ ಆಗಿರತಕ್ಕಂಥಾದ್ದು ಕೆಮಿಕಲ್ಸ್ ಅನಾಲಸಿಸ್‌ನಿಂದ ಬಂದಿರತಕ್ಕಂಥಾ..

ಪ್ರೊ. ಎಂ.ಡಿ. ನಂಜುಂಡ ಸ್ವಾಮಿ : ತಮ್ಮ ಕೃಷಿ ಇಲಾಖೆಯಿಂದ ಮಾರಾಟ ಮಾಡಿದಂತಹ ಕೀಟನಾಶಕಗಳ ಕೆಮಿಕಲ್ಸ್ ಅನಾಲಿಸಿಸ್‌ನ್ನು ನಾನು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ರವರಿಂದ ಮಾಡಿಸಿದ್ದೇನೆ. ಧಾರವಾಡ ತಾಲ್ಲೂಕಿನಲ್ಲಿ ಕಲಬೆರಕೆ ಆಗಿದೆಯೆಂದು ಗೊತ್ತಾಗಿದೆ. ಈ ಕಾರಣದಿಂದಲೇ ನಾನು ಹೇಳಿದ್ದುದು ಕನಿಷ್ಟ ನಿಮ್ಮ ಇಲಾಖೆಯಲ್ಲಿ ಇಂತಹ ಒಂದು ಕೆಮಿಕಲ್ ಅನಾಲಿಸಿಸ್ ವ್ಯವಸ್ಥೆ ಮಾಡಿಸಿ ಎಂದು, This has been uniform all over the State and average yield of cotton this year is one quintal per acre.

ಶ್ರೀ ಜಿ.ಪುಟ್ಟಸ್ವಾಮಿ ಗೌಡ : ಉತ್ತರದಲ್ಲಿ ವ್ಯತ್ಯಾಸವಿದೆಯೆಂದು ಸ್ಪಷ್ಟನೆ ಕೇಳಿದ್ದರಿಂದ ಆ ಮಾತನ್ನು ನಾನು ಹೇಳಿದೆ. ಅವರು ಸಬ್-ಸ್ಟ್ಯಾಂಡರ್ಡ್ ಮಾಡಿದ್ದಾರೆ. ಈಗ ಮ್ಯಾಲಾಥಿಯಾನ್ ಅಥವಾ ಬಿ.ಹೆಚ್.ಸಿ.10 ಪರ್‌ಸೆಂಟ್.

MR. SPEAKER : Where do you draw the line?

ಶ್ರೀ ಜಿ.ಪುಟ್ಟಸ್ವಾಮಿ ಗೌಡ : ನಮ್ಮ ಅಂಟಿಸಿಪೇಷನ್‌ನಲ್ಲಿ ಸಂಪೂರ್ಣ ಕಲಬೆರಕೆ ಎಂದರೆ,

ಅಧ್ಯಕ್ಷರು : ಸಂಪೂರ್ಣ ಕಲಬೆರಕೆ ಎಂದು ಹೇಳಬೇಕಾದರೆ ಎಷ್ಟು ಪರ್ಸೆಂಟ್ ಇರಬೇಕು?

ಶ್ರೀ ಜಿ. ಪುಟ್ಟಸ್ವಾಮಿ ಗೌಡ : ಅದರಲ್ಲಿ ನಿಗದಿ ಮಾಡಿದ್ದಾರೆ. ಬಿ.ಹೆಚ್.ಸಿ 10 ಪರ್‌ಸೆಂಟ್, ಇಂಡೋಲ್ಫಾನ್ 35 ಪರ್‌ಸೆಂಟ್ ಹೀಗೆ ಸ್ಪೆಸಿಫಿಕೇಷನ್ ಹಾಕಿದ್ದಾರೆ. ಅಷ್ಟರದಲ್ಲಿ ಇಲ್ಲದೆ 1 ಪರ್ಸೆಂಟ್ 2 ಪರ್ಸೆಂಟ್ ಕಡಿಮೆ ಇದ್ದರೆ ಅದನ್ನು ಸಬ್ ಸ್ಟ್ಯಾಂಡರ್ಡ್ ಎಂದು ಹೇಳುತ್ತೇವೆಂದು ಅವರಿಗೆ ಉತ್ತರ ಕೊಟ್ಟಿದ್ದೇನೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಇದರ ಭಗ್ಗೆ ನಮ್ಮ ರೈತರ ಅಳತೆಗೋಲು ಹೇಳುತ್ತೇನೆ. ಏನಾಗಿದೆ. ಸಭಾಧ್ಯಕ್ಷರೇ, ಹುಳು ಸಾಯುವುದಿಲ್ಲ. ಅದು ನಮ್ಮ ಅಳತೆಗೋಲು. ಈ ಹುಳು ಸಾಯಿಸಬೇಕಾದರೆ ಚಪ್ಪಲಿಯಿಂದ ಬಡಿಯಬೇಕಾಗಿದೆ. ಕೀಟ ನಾಶಕದಿಂದ ಆಗುತ್ತಿಲ್ಲ.

ಶ್ರೀ ಟಿ.ಪುಟ್ಟಸ್ವಾಮಿ ಗೌಡ : ಹುಳು ಸಾಯದೆ ಇರುವುದಕ್ಕೆ ಕೆಲವು ಕಾರಣಗಳು ಇವೆ. ಬಿ.ಹೆಚ್.ಸಿ. 5 ಪರ್ಸೆಂಟ್ ಅದನ್ನು ಮುಂಜಾನೆ ಸೂರ್ಯ ಉದಯ ಆಗತಕ್ಕಂಥ ಸಮಯದಲ್ಲಿ ಹೊಡೆಯಬೇಕು.

ಅಧ್ಯಕ್ಷರು : ಮಾನ್ಯ ಈಶ್ವರಪ್ಪನವರೇ, ಇದರ ಬಗ್ಗೆ ಅರ್ಧ ಗಂಟೆಕಾಲ ಡಿಸ್ಕಷನ್‌ಗೆ ನೋಟೀಸ್ ಕೊಡಿ. ನಾನು ಅದಕ್ಕೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ : ಆಗಬಹುದು.

ಹಾಸನ ಜಿಲ್ಲೆಯಲ್ಲಿ ಬರಗಾಲ ಪೀಡಿತ ಪ್ರದೇಶಗಳ ಬಗ್ಗೆ

799 - ಶ್ರೀ ಕೆ.ಹೆಚ್. ಹನುಮೇಗೌಡ : ಮಾನ್ಯ ಕಂದಾಯ ಸಚಿವರು ಈ ಕೆಳಂಕಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಜಿಲ್ಲೆಯ ಯಾವ ಯಾವ ವಿಧಾನ ಸಭಾ ಕ್ಷೇತ್ರಗಳನ್ನು ಬರಗಾಲ ಪೀಡಿತ ಪ್ರದೇಶಗಳೆಂದು ಘೋಷಿಸಲ್ಪಟ್ಟಿದೆ.

ಅ) ಇದುವರೆವಿಗೆ ಬರಗಾಲ ಪರಿಹಾರ ನಿಧಿಯಿಂದ ಜನರಿಗೆ ಕೆಲಸ ಒದಗಿಸಲು ಹಾಸನ, ಶ್ರವಣಬೆಳಗೊಳ, ಗಂಡಸಿ, ಅರಕಲಗೂಡು, ಅರಸೀಕೆರೆ, ಹೊಳೆನರಸೀಪುರ ಮತ್ತು ಬೇಲೂರು ಕ್ಷೇತ್ರಗಳಿಗೆ ಎಷ್ಟೆಷ್ಟು ಹಣವನ್ನು ಒದಗಿಸಲಾಗಿದೆ.

ಆ) ಹಾಸನ ಜಿಲ್ಲೆಗೆ ಬರಗಾಲ ಪರಿಹಾರ ನಿಧಿಯಿಂದ ಒದಗಿಸಿದ ಹಣವನ್ನು ಯಾವ ವಿಧಾನದಿಂದ ಮತ್ತು ಯಾವ ಆಧಾರದ ಮೇಲೆ ಯಾವ ಆಧಾರದ ಮೇಲೆ ಒದಗಿಸಲಾಗಿದೆ?

ಈ) ಹಣವನ್ನು ಕ್ಷೇತ್ರಾವರು ಹಂಚುವಾಗ ಆಯಾ ಕ್ಷೇತ್ರದ ಶಾಸಕರನ್ನು ಸಮಿತಿಗೆ ಕರೆಸಿ ಆಯಾ ಕ್ಷೇತ್ರದ ಅವಶ್ಯಕತೆಗೆ ಅನುಗುಣವಾಗಿ ಹಂಚಲಾಗಿದೆಯೇ?

ಉ) ಈ ಹಣವನ್ನು ಹಂಚಲು ಸರ್ಕಾರದಿಂದ ಸಮಿತಿಯನ್ನೇನಾದರೂ ರಚಿಸಿದೆಯೇ, ಹಾಗಿದ್ದಲ್ಲಿ, ಆ ಸಮಿತಿಯ ಸದಸ್ಯರುಗಳಾರು, ವಿವರ ಕೊಡುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) ಘೋಷಣೆ ಮಾಡಿರುವುದಿಲ್ಲ.

ಆ) ವಿವರಗಳು ಈ ಕೆಳಕಂಡಂತಿವೆ.

ಕ್ಷೇತ್ರದ ಹೆಸರು	ಬಿಡುಗಡೆಯಾದ ಹಣ ಲಕ್ಷ ರೂ.ಗಳಲ್ಲಿ
1. ಹಾಸನ	9.91
2. ಶ್ರವಣಬೆಳಗೊಳ ಸೇರಿದಂತೆ ಚನ್ನರಾಯಪಟ್ಟಣ	11.60
3. ಗಂಡಸಿ	22.52
4. ಅರಕಲಗೂಡ	6.25
5. ಅರಸೀಕೆರೆ	16.15
6. ಹೊಳನರಸೀಪುರ	11.30
7. ಬೇಲೂರು	5.88

ಇ) ಋತುಮಾನ ಪರಿಸ್ಥಿತಿ ಹಾಗೂ ಅವಶ್ಯಕತೆ ಮೇರೆಗೆ.

ಈ) ಸಂಬಂಧಪಟ್ಟ ಶಾಸಕರುಗಳು ನೀಡಿದ ಅಭಿಪ್ರಾಯ ಹಾಗೂ ಸಲಹೆಗಳನ್ನು ಗಮನದಲ್ಲಿಟ್ಟು ಕೊಂಡು ಪರಿಹಾರ ಕಾರ್ಯಕ್ರಮಗಳನ್ನು ಯೋಚಿಸಿ, ಕೈಗೊಳ್ಳಲಾಗುತ್ತಿದೆ. ಅಂತೆಯೇ ಹಣವನ್ನು ಸಹ ಬಿಡುಗಡೆ ಮಾಡಲಾಗುತ್ತಿದೆ.

ಉ) ಇಲ್ಲ.

ಶ್ರೀ ಕೆ.ಹೆಚ್. ಹನುಮೇಗೌಡ : ಸ್ವಾಮಿ, ನನ್ನ ಮೊದಲನೆಯ ಪ್ರಶ್ನೆ ಹಾಸನ ಜಿಲ್ಲೆಯ ಯಾವ ಯಾವ ವಿಧಾನ ಸಭಾ ಕ್ಷೇತ್ರಗಳನ್ನು ಬರಗಾಲಪೀಡಿತ ಪ್ರದೇಶಗಳೆಂದು ಘೋಷಿಸಲ್ಪಟ್ಟಿವೆ ಎಂದು ಘೋಷಣೆ ಮಾಡಿರುವುದಿಲ್ಲವೆಂದು ಹೇಳಿದ್ದಾರೆ. ಏಕೆ? ಬರಗಾಲ ಇಲ್ಲವೆಂದೇ ಅಥವಾ ಯಾವ ಕಾರಣಕ್ಕೆ ಮಾಡಲಿಲ್ಲ? ಅಲ್ಲಿ ಒಂದು ಕೆರೆಯಲ್ಲೂ ಸ್ವಲ್ಪವೂ ನೀರಿಲ್ಲ. ಬೆಳೆ ಸಂಪೂರ್ಣವಾಗಿ ಹಾಳಾಗಿ ಹೋಗಿದೆ. ಅನೇಕ ಊರುಗಳಲ್ಲಿ ಸಾವಿರಾರು ಜನ ಕೆಲಸ ಹುಡುಕಿಕೊಂಡು ಪಶ್ಚಿಮ ಘಟ್ಟದ ಕಾಫಿ ತೋಟಗಳಿಗೆ ವಲಸೆ ಹೋಗಿದ್ದಾರೆ. ರೆವಿನ್ಯೂ ಕಮೀಷನರ್‌ರವರನ್ನು ಕರೆದುಕೊಂಡು ಹೋಗಿ ತೋರಿಸಿದ್ದೇನೆ. ಡಿವಿಷನಲ್ ಕಮೀಷನರ್‌ರವರನ್ನು ಕರೆದುಕೊಂಡು ಹೋಗಿ ತೋರಿಸಿದ್ದೇನೆ. ಅವರೆಲ್ಲಾ ಬಂದು ನೋಡಿ ಏನೂ ಇಲ್ಲವಲ್ಲಾ ಸರ್ವನಾಶವಾಗಿ

ಹೋಗಿದೆಯಲ್ಲಾ, ಜನ ಹೇಗೆ ಬದುಕಬೇಕೆಂದು ಅವರು ಕಣ್ಣೀರಿಟ್ಟು ಬಂದಿದ್ದಾರೆ. ಇಂಥಾ ಪರಿಸ್ಥಿತಿಯನ್ನು ಅಧಿಕಾರಿಗಳು ನೋಡಿಕೊಂಡು ಬಂದರೂ ಕೂಡಾ ನಾವು ಘೋಷಣೆ ಮಾಡಿಲ್ಲ ಎಂದು ಹೇಳುತ್ತಾರೆ, ಏನು ಮಾಡಿದರೆ ಇವರು ಘೋಷಣೆ ಮಾಡುತ್ತಾರೆ? ಆ ರೈತರ ಗತಿ ಏನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಕೇಳಿದ್ದುದು. ನೀವು ಬರಗಾಲ ಪ್ರದೇಶವೆಂದು ಘೋಷಿಸಿದ್ದೀರೋ ಎಂದು. ಆ ಒಂದು ಕ್ರೈಟೀರಿಯಾದಲ್ಲಿ ಇದು ಬರುವುದಿಲ್ಲ. ಇಲ್ಲಿ ಅಭಾವ ಪರಿಸ್ಥಿತಿ ಇದೆ. ಎಂದು ಸರ್ಕಾರ ಮನಗಂಡು ಐಡಂಟ್‌ಫೈ ಮಾಡಿದೆ. ಸುಮಾರು ಐದಾರು ಕ್ಷೇತ್ರಗಳನ್ನು ಗುರುತಿಸಲಾಗಿದೆ. ಅವುಗಳ ಹೆಸರುಗಳನ್ನು ಕೊಟ್ಟಿದ್ದೇವೆ. ಮತ್ತು ಅಭಾವ ಪರಿಸ್ಥಿತಿಗೆ ಅನುಸಾರವಾಗಿ ಅಲ್ಲಿ ನಾವು ಕಾಮಗಾರಿಗಳನ್ನು ಕೂಡಾ ತೆಗೆದು ಕೊಂಡಿದ್ದೇವೆ.

ಶ್ರೀ ಕೆ.ಹೆಚ್. ಹನುಮೇಗೌಡ : ಸ್ವಾಮಿ, ಇದರ ಟ್ರಿಕ್ ಏನೆಂದರೆ, ಅಭಾವ ಪರಿಸ್ಥಿತಿ ಎಂದು ಘೋಷಣೆ ಆದರೆ ರೈತರ ಸಾಲ ಮನ್ನಾ ಆಗುವುದು ಅಥವಾ ಎರಡು ಮೂರು ವರ್ಷ ಮುಂದುಹೋಗುವುದು ಮತ್ತು ಏನಾದರೂ ರಿಯಾಯಿತಿ ಸಿಗುತ್ತದೆ. ಇದನ್ನು ತಪ್ಪಿಸುವ ದೃಷ್ಟಿಯಿಂದ ಯಾರೋ ಕೆಲವರು ಮಾಡಿರತಕ್ಕಂಥ ಇದೊಂದು ಕುತಂತ್ರವೆಂದು ನನಗನಿಸುತ್ತದೆ. ನಿರ್ಭಾಗ್ಯ ರೈತರ ಮೇಲೆ ಇವರು ಈ ರೀತಿ ಮಾಡುತ್ತಾರೆ. ಇಷ್ಟೆಲ್ಲಾ ಅಭಾವ ಇದ್ದರೂ ಕೂಡಾ ಘೋಷಣೆ ಮಾಡಿದ್ದರೆ. ಇವರಿಗೆ ಏನಾಗುತ್ತದೆ? ಬರಗಾಲ ಎಂದು ಹೇಳುವುದಕ್ಕೆ ಏನೇನು ಬೇಕೋ ಆ ಪರಿಸ್ಥಿತಿ ಇರುವುದರಿಂದ ಇವರು ಏಕೆ ಮಾಡಲಿಲ್ಲ. ಸ್ವಲ್ಪ ದುಡ್ಡು ಕೊಟ್ಟಿದ್ದೇವೆ ಕೆಲಸ ಮಾಡುತ್ತಾರೆಂದು ಹೇಳಿದರೆ ಹೇಗೆ?

ಅಧ್ಯಕ್ಷರು : ಘೋಷಣೆ ಮಾಡುವುದಕ್ಕೆ ಅವರಿಗೆ ಕೆಲವು ಅಡ್ಡಿಗಳಿವೆ. ಅದಕ್ಕೆ ಇವರು ಬರಗಾಲವೆಂದು ಘೋಷಣೆ ಮಾಡುವುದಕ್ಕೆ ಸಾಧ್ಯವಿಲ್ಲ. ಆದರೆ ಸ್ಕೇರ್ಸಿಟಿ ಅಫೆಕ್ಟೆಡ್ ಏರಿಯಾ ಎಂದು ಘೋಷಣೆ ಮಾಡಿದ್ದಾರೆ.

ಶ್ರೀ ಕೆ.ಹೆಚ್. ಹನುಮೇಗೌಡ : ಘೋಷಣೆ ಮಾಡಿದ್ದರೆ ಕೆಲವು ರಿಯಾಯಿತಿಗಳು ಸಿಗುತ್ತಿದ್ದವು.

ಅಧ್ಯಕ್ಷರು : ಏನು ಸಿಗುತ್ತಿದ್ದವು.

ಶ್ರೀ ಕೆ.ಹೆಚ್. ಹನುಮೇಗೌಡ : ಸಾಲ ವಸೂಲಾತಿ ಪೋಸ್ಟ್‌ಪೋನ್‌ಮೆಂಟ್ ಆಗುತ್ತಿತ್ತು.

ಅಧ್ಯಕ್ಷರು : ಈಗಲೂ ಮಾಡುತ್ತಾರೆ ಅದನ್ನು

ಶ್ರೀ ಕೆ.ಹೆಚ್. ಹನುಮೇಗೌಡ : ಮಾಡುವುದು, ಮಾಡದೇ ಇರುವ ವಿಚಾರ ಬೇರೆ. ಕ್ಷಾಮವೆಂದು ಹೇಳುವುದಕ್ಕೆ ಏನೇನು ಸಂಭವಗಳು ಬೇಕೋ ಅದೆಲ್ಲಾ ಇದ್ದರೂ ಕೂಡಾ ಇವರು ಮಾಡದೆ ಇರುವುದಕ್ಕೆ ಕಾರಣ ಏನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೇ, ನಿನ್ನೆಯ ದಿವಸ ಇದರ ಬಗ್ಗೆ ರಿಪ್ಲೈ ಮಾಡುವಾಗಲೇ ಹೇಳಿದ್ದೆ. ಫೆಮೈನ್ ಕೋಡ್ ಪ್ರಕಾರ ಮತ್ತು ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟಿನಿಂದ ಬಂದಂಥ ರೀಪೋರ್ಟ್ ಪ್ರಕಾರ, ರೈನ್ ಫಾಲ್ ಸ್ಟ್ಯಾಟಿಸ್ಟಿಕ್ಸ್ ಪ್ರಕಾರ ಯಾವ ಯಾವ ತಾಲ್ಲೂಕುಗಳು, ಹೋಬಳಿಗಳು, ವಿಲೇಜ್‌ಗಳು ಸ್ಕೇರ್ಸಿಟಿ ಅಫೆಕ್ಟೆಡ್ ಏರಿಯಾ ಎಂದು ಗುರುತಿಸಲಾಗುತ್ತಿದೆ. ಆಮೇಲೆ ಸಂಬಂಧಪಟ್ಟ ತಹಶೀಲ್ದಾರ್ ಮತ್ತು ರೆವಿನ್ಯೂ ಇನ್ಸ್‌ಪೆಕ್ಟರ್‌ರವರು ಆಣೆವಾರಿ ಫಿಕ್ಸ್ ಮಾಡುತ್ತಾರೆ. ಇದರ ಪ್ರಕಾರ ರೆಮಿಕ್ಷನ್ ಆಗಲೀ, ಟ್ಯಾಕ್ಸ್ ಸೆಸ್ಪೆನ್‌ಷನ್ ಆಗಲಿ ಅಥವಾ ಎಕ್ಸೆಷನ್ ಆಗಲೀ ಆಗತಕ್ಕಂಥದ್ದನ್ನು ಮಾಡುತ್ತಾರೆ. ನಾನು ಅದನ್ನು ಸ್ಪಷ್ಟಪಡಿಸಿದ್ದೇನೆ.

ಈ ಒಂದು ಕ್ರೈಟೀರಿಯಾದಲ್ಲಿ ಇದು ಬರುವುದಿಲ್ಲ ಎನ್ನುವ ದೃಷ್ಟಿಯಿಂದ ಅದನ್ನು ನಮೂದು ಮಾಡಿಲ್ಲ ಹೊರತಾಗಿ ಅಭಾವ ಪರಿಸ್ಥಿತಿಗೆ ಅನುಸಾರವಾಗಿ ಯಾವ ಯಾವ ಕೆಲಸ ಕಾರ್ಯಗಳನ್ನು ಮಾಡಬೇಕು. ಅದನ್ನು ನಾವು ಮಾಡಾತ್ತಿದ್ದೇವೆ.

ಶ್ರೀ ಕೆ.ಹೆಚ್. ಹನುಮೇಗೌಡ : ಅಭಾವ ಪರಿಹಾರ ಕಾಮಗಾರಿಗಳಿಂದ ಜನಗಳಿಗೆ ಕೆಲಸ ಒದಗಿಸುವ ದೃಷ್ಟಿಯಿಂದ ಹಣ ಕೊಟ್ಟಿದ್ದೀರಲ್ಲ, ಅದರಲ್ಲಿ ಯಾವಯಾವ ವಿಧವಾದ ಕೆಲಸಗಳನ್ನು ಪರಿಹಾರ ನಿಧಿಯಿಂದ ಶರು ಮಾಡಬಹುದು. ದಯಮಾಡಿ ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಯಾವ ಯಾವ ಕೆಲಸಗಳನ್ನು ತಾಲ್ಲೂಕು ಪಂಚಾಯತಿ ಸಭೆಯಲ್ಲಿ ಲೆಜಿಸ್ಲೇಟರ್ಸ್ ಹೇಳಿದ್ದಾರೆ ಅಲ್ಲಿ ಅವಶ್ಯಕತೆಗಳಿಗೆ ಅನುಸಾರವಾಗಿ ಜನಗಳಿಗೆ ಕೆಲಸ ಕೊಡತಕ್ಕಂಥದ್ದು. ಇಲ್ಲಿ ಒಂದು ಪಟ್ಟಿ ಇದೆ. ಜಿಲ್ಲೆಯಲ್ಲಿ 106 ಹಳ್ಳಿಗಳಲ್ಲಿ ತೆಗೆದುಕೊಂಡಿರತಕ್ಕದ್ದು ಕೂಡಿ ಎಂದರೆ ಕೊಡುತ್ತೇನೆ. ಇಲ್ಲ ಓದು ಎಂದರೆ ಓದುತ್ತೇನೆ. ಸುಮಾರು ಹತ್ತು ಪುಟ ಇದೆ.

ಅಧ್ಯಕ್ಷರು : ಅವರಿಗೆ ಕಳಿಸಿಕೊಡಿ.

ಶ್ರೀ ಕೆ.ಹೆಚ್.ಹನುಮೇಗೌಡ : ಅಭಾವ ಪರಿಸ್ಥಿತಿಯಲ್ಲಿ ಜನಗಳಿಗೆ ಕೆಲಸ ಕೊಡುವ ದೃಷ್ಟಿಯಿಂದ ಕೊಟ್ಟಿರತಕ್ಕ ಹಣದಲ್ಲಿ ಎರಡು ಲಕ್ಷ ರೂಪಾಯಿಗಳನ್ನು ವ್ಯವಸಾಯದ ಅಧಿಕಾರಿಗಳು 'ಮಿನಿಕಿಟ್' ಎಂದು ಹೇಳಿ ಅದಕ್ಕೆ ದುಡ್ಡು ಕೊಟ್ಟಿದ್ದಾರೆ. ಇದಕ್ಕೆ ಕೊಡುವುದಕ್ಕೆ ಅವಕಾಶ ಇದೆಯೇ ಎಂಬುದು ಮೊದಲನೆಯ ಪ್ರಶ್ನೆ, ಎರಡನೇಯದು ಮೂರುವರೆ ಲಕ್ಷ ರೂಪಾಯಿಗಳನ್ನು ಗ್ರಾಮದ ವಿಲೇಜ್ ಅಕೌಂಟೆಂಟ್ ಬಿಲ್ಡಿಂಗ್ ಕಟ್ಟುವುದಕ್ಕೆ ಕೊಡಬಹುದೇ? ಮೂರನೆಯದು ಜಿಲ್ಲಾ ಸ್ಯೋರ್ಟ್ಸ್ ಆಫೀಸರ್ಸ್ ಅವರಿಗೆ ಎರಡು ಲಕ್ಷ ರೂಪಾಯಿ ಕೊಟ್ಟಿದ್ದಾರೆ. ಹೀಗೆ ಯಾರ್ಯಾರು ಏನೇನು ಬಂದು ಕೇಳುತ್ತಾರೋ ಕೊಡಬಹುದೇ? ಒಂದು ಕಡೆ ಬಡಪಾಯಿಗೆ ಕೆಲಸ ಇಲ್ಲ, ಇನ್ನೊಂದು ಕಡೆ ಬಡವರು ಕೊಟ್ಟಂತಹ ಟ್ಯಾಕ್ಸಿನ ದುಡ್ಡನ್ನು ಹಂಚಿಕೆ ಮಾಡುವಾಗ ಅಧಿಕಾರಿಗಳಿಗೆ ಒಂದು ತರಹ. ದಕ್ಷಿಣೆ ಕೊಡುತ್ತಾರಲ್ಲ ಹಾಗೆ ಇಂತಿಂಥ ಬಾಬುಗಳಿಗೆ ದಕ್ಷಿಣೆ ಕೊಟ್ಟಿದ್ದಾರೆ. ಇದನ್ನು ಕೊಡಬಹುದೇ? ನಿಮ್ಮ ಡೈರೆಕ್ಷನ್ ಇಲ್ಲದೇ ಕೊಟ್ಟಿದ್ದರೆಯೇ ಈ ತರಹ ಕಾನೂನು ವಿರುದ್ಧ ಮಾಡಿದ್ದರೆ ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂಬುದನ್ನು ಹೇಳಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾವು ಅದಷ್ಟು ಮಟ್ಟಿಗೆ ಎಂಪ್ಲಾಯ್‌ಮೆಂಟ್ ಜನರೇಷನ್ ಆಗತಕ್ಕಂಥಹ ಕೆಲಸಗಳನ್ನು ತೆಗೆದುಕೊಳ್ಳಬೇಕು ಎನ್ನತಕ್ಕ ಬಗ್ಗೆ ಇನ್‌ಸ್ಟೆಕ್ಷನ್ಸ್ ಕೊಟ್ಟಿದ್ದೇವೆ. ಅನಿವಾರ್ಯ ಪಕ್ಷದಲ್ಲಿ ಎಲ್ಲಾದರೂ ಇಂತಹದು ತೆಗೆದುಕೊಂಡಿದ್ದು ಕಂಡುಬಂದರೆ ಅಥವಾ ನಮ್ಮ ಡೈರೆಕ್ಷನ್ಸ್ ಅನ್ನು ವಯಿಲೇಟ್ ಮಾಡಿದ್ದರೆ ರಿಪೋರ್ಟ್ ತರಿಸಿ ಸೂಕ್ತವಾದ ಕ್ರಮವನ್ನು ನಾನು ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು : ಮಾನ್ಯ ಲಕ್ಷ್ಮಣ್ಣಯ್ಯನವರೇ, ಅಭಾವ ಪರಿಸ್ಥಿತಿ ಬಗ್ಗೆ ನಿನ್ನೆ ಚರ್ಚೆ ಆಯಿತಲ್ಲ.

ಶ್ರೀ ಬಿ ಹೆಚ್. ಲಕ್ಷ್ಮಣಯ್ಯ : ನಾನು ಒಂದೇ ಒಂದು ಪ್ರಶ್ನೆಯನ್ನು ಕೇಳುತ್ತೇನೆ. ತಾವು ಏನು ಏಳು ಕ್ಷೇತ್ರದಲ್ಲಿ ಎಷ್ಟೆಷ್ಟು ಹಣವನ್ನು ಬಿಡುಗಡೆ ಮಾಡಿದ್ದೇವೆಂದು ವಿವರವಾಗಿ ಹೇಳಿದ್ದೀರಿ. ಈಗ ಅದರಲ್ಲಿ ಬೇಲೂರು ಇದೆ ಈ ತಾಲ್ಲೂಕಿನ 5.88 ಲಕ್ಷ ರೂಪಾಯಿ ಹಣವನ್ನು ಕೊಟ್ಟಿದ್ದೇವೆಂದು ಹೇಳಿದ್ದೀರಿ. ಈ ಕ್ಷೇತ್ರಗಳಿಗೆ ಕೊಟ್ಟಿರತಕ್ಕದ್ದರಲ್ಲಿ ಪ್ರತಿ ಒಂದರ ಪ್ರೊಗ್ರೆಸ್ ಏನು? ಯಾವ ಯಾವ ಕೆಲಸ ಮಾಡಿದರು? ಜನಗಳಿಗೆ ಕೆಲಸ ಒದಗಿಸುವ ದೃಷ್ಟಿಯಿಂದ ಎಷ್ಟು ಹಣ ಖರ್ಚು ಮಾಡಿದ್ದಾರೆ. ಕುಡಿಯುವ ನೀರಿನ ಅವಶ್ಯಕತೆಗೆ ಎಷ್ಟು ಖರ್ಚು ಮಾಡಿದ್ದಾರೆ.

ಮತ್ತೆ ಚನ್ನಾರಾಯಪಟ್ಟಣ ಮತ್ತು ಗಂಡಸಿ ಕೆಲವು ಕ್ಷೇತ್ರಗಳಿಗೆ ಜಾಸ್ತಿ ಕೊಟ್ಟಿದ್ದೀರಿ. ಹೊಳೆನರಸೀಪುರಕ್ಕೆ ಸಹ ಜಾಸ್ತಿ ಕೊಟ್ಟಿದ್ದೀರಿ. ಸುಮಾರು ಮುಕ್ಕಾಲು ಭಾಗ ನೀರು ಅಲ್ಲಿ ಇದೆ. ಒಂದು ಹೋಬಳಿಯಲ್ಲಿ ಬರಗಾಲ ಪರಿಸ್ಥಿತಿ ಇರತಕ್ಕದ್ದನ್ನು ನಾವು ಒಪ್ಪಿಕೊಳ್ಳುತ್ತೇವೆ. ಚನ್ನರಾಯಪಟ್ಟದಲ್ಲಿ ಈಗಾಗಲೇ ಕೆಲವು ಭಾಗದಲ್ಲಿ ಪೂರಾ ನೀರಾವರಿ ಬಂದಿದೆ. ಆದ್ದರಿಂದ ಈಗ ಬೇಲೂರು ತಾಲ್ಲೂಕಿನ 260 ಹಳ್ಳಿಗಳು ಬರಗಾಲಕ್ಕೆ ತುತ್ತು ಆಗಿವೆ ಎಂದು ತಾಲ್ಲೂಕು ತಹಶೀಲ್ದಾರ್ ರೆಕ್ಕಂಡ್ ಮಾಡಿದ್ದಾರೆ. ನಾವು ತಾಲ್ಲೂಕು ಪಂಚಾಯತಿಯಲ್ಲಿ ರೆಕ್ಕೆಂಡ್ ಮಾಡಿದ್ದೇವೆ. ಇಷ್ಟಾದರೂ ಸಹ 5.88 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ. 5 ಲಕ್ಷ 88 ಸಾವಿರ ರೂಪಾಯಿಗಳನ್ನು ಯಾವಾಗ ಕೊಟ್ಟಿರಿ? ಕೊಟ್ಟು ಎಷ್ಟು ದಿವಸ ಆಗಿದೆ. ಎಷ್ಟು ದಿವಸ ಆಗಿದೆ. ಎಷ್ಟು ದಿವಸದಿಂದ ಕೆಲಸ ನಡೆಯುತ್ತಾ ಇಲ್ಲ ಎಂಬುದನ್ನು ದಯಮಾಡಿ ತಿಳಿಸಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಕೆಲಸ ಯಾವಾಗ ಪ್ರಾರಂಭ ಆಯಿತು. ಎನ್ನುವುದರ ಬಗ್ಗೆ ಡೇಟ್ಸ್ ಇಲ್ಲ. ಆದರೆ ಇಷ್ಟು ಮಾತ್ರ ಹೇಳುತ್ತೇನೆ. ಎಲ್ಲೆಲ್ಲಿ ಕೆಲಸವನ್ನು ತೆಗೆದುಕೊಳ್ಳಬೇಕು ಎಂದು ನಾವು ಡಿಸಿಗಳಿಗೆ ನೇರವಾಗಿ ಹಣವನ್ನು ಬಿಡುಗಡೆ ಮಾಡುತ್ತೇವೆ. ಅದು ಅವಶ್ಯಕತೆಗಳಿಗೆ ಅನುಸಾರವಾಗಿರುತ್ತದೆ. ಅವರಿಗೆ ಹಣವನ್ನು ರಿಲೀಸ್ ಮಾಡಿ ಇಂತಿಂಥ ತಾಲ್ಲೂಕಿಗೆ ಇಷ್ಟು,ಇಂತಿಂಹವಕ್ಕೆ ಇಷ್ಟು ಹಣ ಕೊಡಬೇಕೆಂದು ಹೇಳುವುದಿಲ್ಲ,ಲಂಪ್‌ಸಂ ಆಗಿ 10 ಲಕ್ಷ 20 ಲಕ್ಷ 30 ಲಕ್ಷ ಹೀಗೆ ಅವರ ಅವಶ್ಯಕತೆಗಳಿಗೆ ಅನುಸಾರವಾಗಿ ಬಿಡುಗಡೆ ಮಾಡಿ ಅವರು ಕಮಿಟಿಗೆ ಮತ್ತು ಲೆಜಿಸ್ಲೇಟರ್ಸ್ ಅನ್ನು ಕನ್‌ಸಲ್ಟ ಮಾಡಿ ಕೆಲಸವನ್ನು ತೆಗೆದುಕೊಳ್ಳಬೇಕು ಎನ್ನತಕ್ಕದ್ದನ್ನು ನಾವು ಹೇಳಿದ್ದೇವೆ.

ಅವರು ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ನಾವು ಹೇಳಿದ್ದೇನೆ. ಪ್ರತಿಯೊಂದು ಕಡೆಯೂ ರಿವ್ಯೂ ಮಾಡಿದಾಗ ಈ ಮಾತನ್ನು ಹೇಳಿದ್ದೇವೆ. ಮಾನ್ಯ ಸದಸ್ಯರು ಈಗಾಗಲೇ ಹೇಳಿದ ಹಾಗೆ ಎಲ್ಲಿಯಾದರೂ ಒಂದು ತಾಲ್ಲೂಕಿಗೆ ಸಂಬಂಧಪಟ್ಟಂತೆ ಹಣವನ್ನು ಕಡಿಮೆ ಖರ್ಚು ಮಾಡಲಾಗಿದೆ ಎಂದು ಹೇಳಿದರೆ ಅದಕ್ಕೆ ಕಾರಣವಂತೂ ನನಗೆ ಗೊತ್ತಿಲ್ಲ. ಆ ಬಗ್ಗೆ ಇರುವ ವಿವರಗಳನ್ನು ತರಿಸಿಕೊಂಡು ಅಲ್ಲಿ ತೊಂದರೆ ಇದ್ದರೆ ಅದನ್ನು ನಿವಾರಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಅಂತೆಯೇ ಒಟ್ಟು ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೀರಿ ಎಂದು ಕೇಳಿದ್ದಾರೆ. ಕೆಲಾಮಿಟೀಸ್ ರೀಲೀಫ್ ಫಂಡ್‌ನಲ್ಲಿ 37 ಲಕ್ಷರೂಪಾಯಿಗಳು, ನ್ಯಾಷನಲ್ ರೂರಲ್ ವಾಟರ್ ಸಪ್ಲೈ ಸ್ಕೀಮ್‌ನಡಿಯಲ್ಲಿ 20 ಲಕ್ಷ ರೂಪಾಯಿಗಳು, ಪ್ಲಾನ್ ಫಂಡ್‌ನಲ್ಲಿ 7ಲಕ್ಷ ರೂಪಾಯಿಗಳು, ಹೀಗೆ ಸುಮಾರು 64ಲಕ್ಷ ರೂಪಾಯಿಗಳನ್ನು ಕುಡಿಯುವ ನೀರಿಗಾಗಿ ಬಿಡುಗಡೆ ಮಾಡಿದ್ದೇವೆ. ಮತ್ತು ಎಂಪ್ಲಾಮೆಂಟ್ ಜನರೇಶನ್‌ಗಾಗಿ ಸುಮಾರು 1 ಕೋಟಿ, 39ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಇನ್ನು ಮಾನ್ಯ ಹನುಮೇಗೌಡರು ಹೇಳಿದ ಹಾಗೆ ಫಾಡರ್, ಮತ್ತು ಅಗ್ರಿಕಲ್ಚರಲ್ ಮಿನಿಕಿಟ್ಸ್‌ಗಾಗಿ ಎರಡು ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಸ್ಪೆಶಲ್ ನ್ಯೂಟ್ರೀಷನ್ ಪ್ರೋಗ್ರಾಂಗಾಗಿ 1 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದು ಹೀಗೆ ಒಟ್ಟು ಸುಮಾರು 2 ಕೋಟಿ, 11 ಲಕ್ಷ ರೂಪಾಯಿಗಳನ್ನು ಈ ಜಿಲ್ಲೆಗೆ ಬಿಡುಗಡೆ ಮಾಡಿದ್ದೇವೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಪ್ಪು ತಲೆ ಹುಳುಗಳಿಗೆ ತುತ್ತಾದ ತೆಂಗಿನ ಮರಗಳು.

522 ಶ್ರೀ ಬಿ.ಎಂ.ಇದಿನಬ್ಬ (ಉಳ್ಳಾಲ) : ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1988-89 ಹಾಗೂ 1989-90ನೇ ಸಾಲಿನ ಡಿಸೆಂಬರ್ ಅಂತ್ಯದವರೆಗೆ ದಕ್ಷಿಣ